**ದಿನಾಂಕಃ 03/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪಿರ್ಯಾದುದಾರರ ಪರ ಶ್ರೀ ಕೆ ಎನ್ ಡಿ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಗೊತ್ತಿಲ್ಲ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಪಿರ್ಯಾದಾರರು ಪರಿಚಯ ಇಲ್ಲ. ನಾನು ಎಂ ಡಿ ಸಿ ಸಿ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಅದು ಪಿರಿಯಾಪಟ್ಟಣದ ಶಾಖೆ ಎಂದರೆ ಸರಿ. ನಾನು ಪಿರ್ಯಾದುದಾರರೊಂದಿಗೆ ಹೊಗೆಸೋಪ್ಪಿನ ವಿಚಾರವಾಗಿ ವ್ಯವಹಾರ ಹೊಂದಿದ್ದೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರೊಂದಿಗೆ 2016 ರಿಂದ 2019 ರವರೆಗೆ ಕಗ್ಗುಂಡಿ ತಂಬಾಕು ಮಂಡಳಿಯಲ್ಲಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಊರಾದ ಹೆಮ್ಮಿಗ್ರೆ ಗ್ರಾಮದಿಂದ ಕಗ್ಗುಂಡಿ ಗ್ರಾಮ 2 ಕಿ ಮೀ ಅಂತರ ಇದೆ. ನಾನು ಪಿರ್ಯಾದುದಾರರೊಂದಿಗೆ ಹೊಗೆಸೊಪ್ಪು ಪಡೆಯುವ ಮತ್ತು ನೀಡುವ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೂ ಮತ್ತು ಪಿರ್ಯಾದುದಾರರಿಗೂ ಹೊಗೆಸೊಪ್ಪಿನ ವಿಚಾರವಾಗಿ ವ್ಯವಹಾರ ಇದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ದಿಃ 11.02.2018 ರಂದು ಪಿರ್ಯಾದುದಾರರಿಂದ ಒಂದು ತಿಂಗಳ ಮಟ್ಟಿಗೆ ರೂ. 4,50,000/- ಹಣವನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಹಣವನುನ ಹಿಂದುರುಗಿಸಲು ನನಗೆ ಕೇಳಿದಾಗ ಮೈಸೂರು ಮತ್ತು ಚಾಮರಾಜನಗರ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಪಿರಿಯಾಪಟ್ಟಣ ಶಾಖೆಯ ಚೆಕ್ ನಂ. 001027 ಅನ್ನು ದಿಃ 11.04.2018 ನಮೂದಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕಿನ ಮೇಲೆ ನಾನು ಪಿರ್ಯಾದುದಾರರ ಹೆಸರು, ಹಣ ನಮೂದಿಸಿ ಸಹಿ ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದಂತಹ ಚೆಕ್ಕನ್ನು ಪಿರ್ಯಾದುದಾರರು ಪಿರಿಯಾಪಟ್ಟಣ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ ಅಮಾನ್ಯ ಗೊಂಡಿರುತ್ತದೆ ಎಂದರೆ ಸರಿಯಲ್ಲ. ನಂತರ ಪಿರ್ಯಾದುದಾರರು ನನ್ನನ್ನು ಬೇಟಿ ಮಾಡಿ

ಚೆಕ್ಕಿನ ಬಾಬ್ತು ಸಾಲದ ಹಣವನ್ನು ಮರು ಪಾವತಿಸಲು ಕೇಳಿಕೊಂಡರು ಸಹ ನಾನು ಸದರಿ ಹಣವನ್ನು ಹಿಂದುರುಗಿಸಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 16.04.2018 ರಂದು ನನಗೆ ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ಸರಿಯಲ್ಲ. ದಿಃ 20.04.2018 ರಂದು ನಾನು ತಿಳುವಳಿಕೆ ಪತ್ರ ಖುದ್ದಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ತಿಳುವಳಿಕೆ ಪತ್ರ ಬಂದಿಲ್ಲ, ಅದಕ್ಕೆ ಪ್ರತ್ಯುತ್ತರ ನೀಡಿಲ್ಲ ಎಂದು ನುಡಿಯುತ್ತಾರೆ.

3. ನನ್ನ ದಂ.ಪ್ರ.ಸಂ ಕಲಂ 313 ರಲ್ಲಿರುವ ಸಹಿ ನನ್ನದು. ನನ್ನ ವಕಾಲತ್ ನಲ್ಲಿರುವ ಸಹಿ ನನ್ನದೇ. ನಿಪಿ-1 ರಲ್ಲಿರುವ ಸಹಿ ನನ್ನದಲ್ಲ. ನನ್ನ ವಕಾಲತ್ ನಲ್ಲಿರುವ ಸಹಿಗೂ ನನ್ನ ಚೆಕ್ಕಿನಲ್ಲಿರುವ ಸಹಿಗೂ ಯಾವುದೇ ವ್ಯತ್ಯಾಸ ಇಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ನೀಡಿರುವ ತಿಳುವಳಿಕೆ ಪತ್ರವನ್ನು ಸ್ವೀಕರಿಸಿ ನಿಪಿ-5 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಚೆಕ್ ಕಳೆದುಕೊಂಡಿದ್ದೇನೆ ಎಂದು ಹೇಳಿದ ದಿನಾಂಕ ಗೊತ್ತಿಲ್ಲ. ನಾನು ಆ ದಿನ ಹೆಮ್ಮಿಗೆ ಗ್ರಾಮದಿಂದ ಅರಕಲಗೂಡು ಗ್ರಾಮಕ್ಕೆ ಹೋಗುತ್ತಿದ್ದೆ. ಅದರ ವಾರ ಗೊತ್ತಿಲ್ಲ. ಚೆಕ್ ಕಳೆದುಕೊಂಡ ಬಗ್ಗೆ ಪೋಲೀಸರಿಗೆ ಅಥವಾ ಬ್ಯಾಂಕ್ ನವರಿಗೆ ದೂರನ್ನು ಸಲ್ಲಿಸಿಲ್ಲ. ಸಾಕ್ಷಿಯು ಮುಂದುವರೆದು ಚೆಕ್ ಕಳೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಚೆಕ್ ಕಳೆದುಕೊಂಡಿದ್ದು, ನನ್ನ ಮಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ದಾಖಲೆಯನ್ನು ಹುಡುಕಬೇಕು. ನಾನು ಗೃಹಕೃತ್ಯ ಖರ್ಚಿಗಾಗಿ ಮತ್ತು ಕೈಸಾಲ ತೀರಿಸಲು ಹಾಗೂ ಕಾನೂನುಬದ್ಧ ಅವಶ್ಯಕತೆಗಾಗಿ ಪಿರ್ಯಾದುದಾರರಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ಸಹಿ ಇದ್ದರೂ ಸಹ ಆರೋಪಿತನಿಂದ ಅನ್ಯತಾ ಪಾಯಿದೆ ಹೊಂದಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-1 ರಲ್ಲಿ ಬರವಣಿಗೆ ಮಾಡಿ

ಪಿರ್ಯಾದುದಾರರಿಗೆ ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಚೆಕ್ಕನ್ನು ಕಳೆದುಕೊಂಡಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀಸವಾಲನ್ನು ಪಿರ್ಯಾದುದಾರರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**